ಅಭಿವೃದ್ಧಿ ಹೊಂದಿತು. ಊರಿನಲ್ಲಿ ಕೆಲವರು ಅಂಗಡಿಯಿಂದ ಪದಾರ್ಥಗಳನ್ನು ಸಾಲವಾಗಿಯೂ ತೆಗೆದುಕೊಳ್ಳುತ್ತಿದ್ದರು. ಆ ಪೈಕಿ ಒಂದಿಬ್ಬರು ಸಾಲವನ್ನು ಹಿಂದಿರುಗಿಸದೆ ವಾಯಿದೆ ಹೇಳುವುದು, ತಗಾದೆ ತೆಗೆಯುವುದು ಮಾಡತೊಡಗಿದರು. ಬೇಸತ್ತ ಅಂಗಡಿಯವನು ಒಂದು ದಿನ ಏರು ಧ್ವನಿಯಲ್ಲಿ ತನ್ನ ಸಾಲ ತೀರಿಸುವಂತೆ ಅವರಿಗೆ ಆಗ್ರಹಿಸಿದ. ಆಗ, ಆ ಪೈಕಿ ಒಬ್ಬ ಸಾಲಗಾರ ಅಂಗಡಿಯವನಿಗೆ ಪ್ರಶ್ನೆ ಹಾಕಿದ–

ಸಾಲಗಾರ: ನೀನು ನಮ್ಮೂರಲ್ಲಿ ಅಂಗಡಿ ಇಟ್ಟು ಎಷ್ಟು ವರ್ಷವಾಯ್ತು?

ಅಂಗಡಿಯವನು: ಐದು ವರ್ಷ ಆಯ್ತು.

ಸಾಲಗಾರ: ಆಗ ನಿನ್ನ ಬಂಡವಾಳ ಎಷ್ಟಿತ್ತು?

ಅಂಗಡಿಯವನು: ಐನೂರು ರೂಪಾಯಿ.

ಸಾಲಗಾರ: ಈಗ ನಿನ್ನ ಅಂಗಡಿ ಬಂಡವಾಳ ಎಷ್ಟು?

ಅಂಗಡಿಯವನು: ಇಪ್ಪತ್ತೈದು ಸಾವಿರ ಇರಬಹುದು.

ಸಾಲಗಾರ: ಇಪ್ಪತ್ತೈದು ಸಾವಿರ ರೂಪಾಯಿ! ಐದು ವರ್ಷದ ಹಿಂದೆ ನೀನು ಹಾಕಿದ ಬಂಡವಾಳ ಐನೂರು ರೂಪಾಯಿ, ಈಗ ಬಂದು ಇಪ್ಪತ್ತೈದು ಸಾವಿರ ರೂಪಾಯಿಗೆ ತಲುಪಿದೆ. ಇಷ್ಟು ಹಣ ನಿನಗೆ ಎಲ್ಲಿಂದ ಬಂತು? ನಮ್ಮೂರಿನವರು ಕೊಟ್ಟ ಹಣ ತಾನೆ? ಅಂದ್ರೆ ನಮ್ಮ ಹಣವೇ ನಿನ್ನ ಮೇಲದೆ ಅಂದಂಗಾಯ್ತು. ಹಂಗೆ ನೋಡಿದ್ರೆ, ನೀನೇ ನಮಗೆ ವಾಪಸ್ಸು ಕೊಡಬೇಕು, ಗೊತ್ತಾ?

–ಎಂದು ಸಾಲಗಾರ ತನ್ನದೇ ಆದ ತರ್ಕಬದ್ಧವಾದ ವಾದ ಮಂಡಿಸಿದ. ಜೊತೆಯಲ್ಲಿದ್ದವರು ಹೂಂಗುಟ್ಟಿದರು. ಅವನ ಮಾತು ಕೇಳಿ ಅಂಗಡಿಯವನು ದಿಗ್ಭ್ರಾಂತನಾದ. ಇನ್ನು ಆ ಊರಿನಲ್ಲಿ ತನಗೆ ಉಳಿಗಾಲವಿಲ್ಲವೆಂದು ನಿರ್ಧರಿಸಿ, ಇನ್ನೊಂದೆರಡು ತಿಂಗಳಲ್ಲಿ ಅಂಗಡಿಯನ್ನು ಬೇರೊಂದೂರಿಗೆ ಸ್ಥಳಾಂತರಿಸಿದ ಅಂತ ಬೇರೆ ಹೇಳಬೇಕಾಗಿಲ್ಲ ತಾನೆ?

ಇವನ್ನೆಲ್ಲ ನೋಡಿದಾಗ, ಭಂಡತನದ ಪ್ರದರ್ಶನ ಅನ್ನೋಣವೆ? ಅಥವಾ ಬದುಕುವ ಇನ್ನೊಂದು ದಾರಿ ಅನ್ನೋಣವೆ? ಇದನ್ನು ನಮ್ಮ ಓದುಗರೇ ನಿರ್ಧರಿಸಬೇಕು. ಇದಕ್ಕಿಂತ ಭಿನ್ನವಾದ ಇನ್ನೊಂದು ಸಾಲ ಮರುಪಾವತಿಯ ಸ್ವಾರಸ್ಯವನ್ನು ಇಲ್ಲೇ ಹೇಳಿಬಿಡುವುದು ಸೂಕ್ತ. ಇನ್ನೊಂದು ಊರು. ಅದು ಈಗಲೂ ಇದೆ. ಆ ಊರಿನ ಅಂಗಡಿಯಲ್ಲೊಬ್ಬ ಪರಿಚಯದ ಮೇಲೆ ಪದಾರ್ಥಗಳನ್ನು ಸಾಲವಾಗಿ ತೆಗೆದುಕೊಳ್ಳುತ್ತಿದ್ದ. ಒಂದೆರಡು ತಿಂಗಳಾಯಿತು. ಸಾಲದ ಮೊತ್ತ ಎರಡು ಸಾವಿರ ದಾಟಿತು. ಸಹಜವಾಗಿ ಅಂಗಡಿಯವನು ಅವನಿಂದ ಹಣ ಕೇಳಿದ. ಶುರುವಾಯಿತು – ಬೆಳಗ್ಗೆ, ಸಂಜೆ, ನಾಳೆ, ನಾಳಿದ್ದು ಅಂತ ವಾಯಿದೆ ಹೇಳುವುದು. ಪರಿಣಾಮ, ಅಂಗಡಿಯವನಿಗೆ ಅವನ ಮೇಲೆ ಇಟ್ಟಿದ್ದ ವಿಶ್ವಾಸ ನಾಶವಾಯಿತು. ಬೇಸತ್ತ ಅಂಗಡಿಯವನು ಒಂದು ದಿನ ಅವನ ಮೇಲೆ ಜಗಳಕ್ಕೆ ಬಿದ್ದ–

ಅಂಗಡಿಯವನು: ನನ್ನ ಹಣ ಮೊದಲು ಚುಕ್ತಾ ಮಾಡು.

ಸಾಲಗಾರ: ಈಗಿಲ್ಲ.

ಅಂಗಡಿಯವನು: ಅದಾಗಲ್ಲ, ಈಗ್ಲೆ ಬೇಕು.

ಸಾಲಗಾರ: (ಜೇಬು ತಡಕಿ, ಐದು ರೂಪಾಯಿ ನೋಟನ್ನು ಮುಂದೆ ಹಿಡಿದು) ತಗೋ ನಿನ್ನ ಹಣ.

ಅಂಗಡಿಯವನು: (ಬೆರಗಿನಿಂದ ನೋಡಿ) ಏನು, ಐದು ರೂಪಾಯಿ ಕೊಡ್ತಾ ಇದ್ದೀಯೆ? ನೀನು ಕೊಡಬೇಕಾಗಿರೋದು ಎರಡು ಸಾವಿರ ರೂಪಾಯಿ ಗೊತ್ತಾ?

ಸಾಲಗಾರ: (ಶಾಂತವಾಗಿ) ಗೊತ್ತು. ಆದರೆ, ನಾನು ಒಂದೇ ಬಾರಿಗೆ ಎರಡು ಸಾವಿರ ರೂಪಾಯಿನಷ್ಟು ಸಾಮಾನುಗಳನ್ನು ಕೊಂಡ್ಕೊಂಡಿಲ್ಲ. ಕಂತಿನಲ್ಲಿ ತಗೊಂಡೆ, ಈಗ ಕಂತಿನಲ್ಲಿ ತೀರಿಸ್ತಾ ಇವ್ನಿ. ತಗೋ ಇದು ನನ್ನ ಮೊದಲ ಕಂತು.